ಹೆಚ್ಚಿದ್ದಲ್ಲಿ, ಅದು deemed forest ಆಗುತ್ತದೆ. ಹಾಗಾದರೆ, ಇದನ್ನು ಪರಿಹರಿಸಬೇಡವೇ?

ಚೇರ್ಮನ್ : ಶ್ರೀನಿವಾಸಶೆಟ್ಟರೆ, ತಾವು ಸಾಕಷ್ಟು ಮಾಹಿತಿಗಳನ್ನು ಕೊಟ್ಟಿದ್ದೀರಿ. ಅರಣ್ಯ ಸಚಿವರು ಹೇಳಲಿ. ಯಾವ ರೀತಿ ಪರಿಹಾರ ಕೊಡಬೇಕು.....

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಎಷ್ಟೋ ಜನರ ಹತ್ತಿರವಿದ್ದ ಕಂದಾಯ ಜಮೀನನ್ನು ಇವತ್ತು ಅಕ್ರಮಿಸಿಕೊಂಡಿದ್ದಾರೆ. ಆತ ಕಾಫಿ ಎಸ್ಟೇಟ್‌ನವನಿರಬಹುದು, ಅಡಿಕೆ ತೋಟದವನಿರಬಹುದು. ಅದಕ್ಕೆ ಏನಾದರೂ ಪರಿಹಾರ ಕಂಡು ಹಿಡಿಯಿರಿ.

ಚೇರ್ಮನ್ : ಮಾನ್ಯ ಕಂದಾಯ ಮತ್ತು ಅರಣ್ಯ ಸಚಿವರಿಬ್ಬರೂ ಸೇರಿಕೊಂಡು ಒಂದು ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಒಂದು ಮೀಟಿಂಗ್ ಕರೆಯಿರಿ. ಎಲ್ಲ ಶಾಸಕರುಗಳನ್ನು ಕರೆಸಿ.

ಕೆರೆಗಳ ಹೂಳೆತ್ತುವುದು

229 (1425) ಶ್ರೀ ಧ್ರುವನಾರಾಯಣ್ ಆರ್. (ಸಂತೇಮರಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮಕ್ಕಾಗಿ ವಿಶ್ವಬ್ಯಾಂಕಿನಿಂದ ದೊರೆತ ನೆರವಿನ ಪ್ರಮಾಣ ಎಷ್ಟು;

ಆ) ಚಾಮರಾಜನಗರ ಜಿಲ್ಲೆಯಲ್ಲಿ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ಕಾಗಿ ಎಷ್ಟು ಕೆರೆಗಳನ್ನು ಗುರುತಿಸಲಾಗಿದೆ;

ಇ) ಅವುಗಳಲ್ಲಿ ಈಗಾಗಲೇ ಎಷ್ಟು ಕೆರೆಗಳಲ್ಲಿ ಹೂಳೆತ್ತಲಾಗಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ವಿಶ್ವಬ್ಯಾಂಕಿನಿಂದ ರಾಜ್ಯದ 9 ಜಿಲ್ಲೆಗಳ 34 ತಾಲ್ಲೂಕುಗಳಲ್ಲಿ 2005 ಕೆರೆಗಳ ಪುನಃಶ್ಚೇತನ ಕಾರ್ಯಕ್ಕೆ 401.81 ಕೋಟಿ ರೂ.ಗಳ ಸಾಲ ಸೌಲಭ್ಯ ದೊರೆತಿದೆ. ಈ ಯೋಜನೆಯಡಿ ಕೆರೆಗಳ ಹೂಳು ತೆಗೆಯುವುದರ ಜೊತೆಗೆ ಜಲಾನಯನ ಪ್ರದೇಶದ ಪೋಷಕ ಕಾಲುವೆ ದುರಸ್ತಿ, ಕೆರೆ ಏರಿ ಬಲವರ್ಧನೆ, ತೂಬು ನಿಯಂತ್ರಣಗಳ ದುರಸ್ತಿ, ರಾಜ ಕಾಲುವೆಗಳ ದುರಸ್ತಿ ಹಾಗೂ ಸಂಬಂಧಪಟ್ಟ ಗ್ರಾಮಸ್ಥರ ಸಾಮಾಜಿಕ ಸುಧಾರಣೆ ಮತ್ತು ಮೀನುಗಾರಿಕೆ, ಕೃಷಿ ಒಳಗೊಂಡಿರುತ್ತವೆ.

ಆ) ಈ ಯೋಜನೆಯಡಿ ಚಾಮರಾಜನಗರ ಜಿಲ್ಲೆಯು ಸೇರಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್.ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ವಿಶ್ವಬ್ಯಾಂಕ್‌ನಿಂದ ಕೆರೆಗಳ ಹೂಳೆತ್ತುವುದಕ್ಕೆ ದೊರೆತ ನೆರವಿನ ಪ್ರಮಾಣವೆಷ್ಟು ಎಂಬ ಪ್ರಶ್ನೆಗೆ ಅವರು ಉತ್ತರ ಕೊಟ್ಟಿದ್ದಾರೆ. 9 ಜಿಲ್ಲೆಗಳ 34 ತಾಲ್ಲೂಕುಗಳಲ್ಲಿ 2005 ಕೆರೆಗಳ ಪುನಃಶ್ಚೇತನಕ್ಕೆ 401.81 ಕೋಟಿ ರೂಪಾಯಿಗಳ ಸಾಲ ಸೌಲಭ್ಯ ದೊರೆತಿದೆಯೆಂಬ ಉತ್ತರ ಕೊಟ್ಟಿದ್ದಾರೆ. ನಾನು ಅವರಲ್ಲಿ ಕೇಳಲು ಇಷ್ಟಪಡುವುದೇನೆಂದರೆ, ವಿಶ್ವಬ್ಯಾಂಕ್ ನೆರವು ಏನಿದೆ, ಬರೀ ಈ 9 ಜಿಲ್ಲೆಗಳಿಗೆ ಮಾತ್ರ ಆ ನೆರವು ಸಿಕ್ಕಿದೆ. ಈ ಜಿಲ್ಲೆಗಳನ್ನು ಆಯ್ಕೆ ಮಾಡುವುದಕ್ಕೆ ಮಾನದಂಡಗಳೇನು? ನಮ್ಮ ಜಿಲ್ಲೆಗಳು ಏಕೆ ವಿಶ್ವಬ್ಯಾಂಕ್ ನೆರವಿಗೆ ಸೇರುತ್ತಿಲ್ಲ? ಇದರಲ್ಲಿ ತಾವು ಅನುಸರಿಸಿರತಕ್ಕ ಮಾನದಂಡವೇನು? ಎನ್ನುವ ಪ್ರಶ್ನೆಯನ್ನು ನಾನು ಅವರಲ್ಲಿ ಕೇಳಲು ಇಚ್ಛಿಸುತ್ತೇನೆ. ಮತ್ತು ಆ 9 ಜಿಲ್ಲೆಗಳು ಯಾವುದೆಂದು ತಾವು ದಯಮಾಡಿ ಹೇಳಬೇಕು.

ಶ್ರೀ ಸಿ.ಎಂ.ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) (ಉಪ ಮುಖ್ಯಮಂತ್ರಿಗಳ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್ ನೆರವಿನೊಂದಿಗೆ 9 ಜಿಲ್ಲೆಗಳಲ್ಲಿ ಸುಮಾರು 2005 ಕೆರೆಗಳನ್ನು ಆಯ್ಕೆ ಮಾಡಿದ್ದು 2002ನೇ ಇಸವಿಯಲ್ಲಿ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. 2002ರಲ್ಲಿ ಕೇಂದ್ರ ಸರಕಾರದ ಪ್ರಸ್ತಾವ ಇದ್ದಂತಹ ಸಂದರ್ಭದಲ್ಲಿ ವಿಶ್ವಬ್ಯಾಂಕ್ ನೆರವಿಗೆ ಬೇಕಾಗಿರುವ ಯಾವ್ಯಾವ ಜಿಲ್ಲೆಗಳಲ್ಲಿ ಕೆರೆಗಳ ಸಂಖ್ಯೆಗಳ ಪ್ರಮಾಣ ಮತ್ತು ಅಲ್ಲಿ ನೀರಾವರಿ ಮೂಲವನ್ನು ಹೆಚ್ಚಿಸುವ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದ ಪ್ರಕಾರ 9 ಜಿಲ್ಲೆಗಳನ್ನು ಆಯ್ಕೆ ಮಾಡಿ ಸುಮಾರು 2005 ಕೆರೆಗಳನ್ನು ಗುರ್ತಿಸಿ, ಸುಮಾರು 401 ಕೋಟಿ ರೂಪಾಯಿಗಳಿಗೆ ವಿಶ್ವಬ್ಯಾಂಕ್ ನೆರವನ್ನು ಪಡೆದಿದ್ದಾರೆ. ಅದರಲ್ಲಿ ಈ ಕೆಲಸ ನಡೆದಿದೆ.

ಶ್ರೀ ಆರ್.ಧ್ರುವನಾರಾಯಣ್ : ಈ ಜಿಲ್ಲೆಗಳನ್ನು ಆಯ್ಕೆ ಮಾಡುವುದಕ್ಕೆ ಮಾನದಂಡಗಳೇನು ಎಂಬುದನ್ನು ಕೇಳಿದ್ದೇನೆ. ಮತ್ತು ದಯಮಾಡಿ ಆ 9 ಜಿಲ್ಲೆಗಳು ಯಾವುವು ಎಂದು ಅವುಗಳ ಹೆಸರುಗಳನ್ನು

ಹೇಳಬೇಕು, ಈ ಜಿಲ್ಲೆಗಳನ್ನು ಆಯ್ಕೆ ಮಾಡುವುದರಲ್ಲಿ ಅನುಸರಿಸಿರತಕ್ಕ ಮಾನದಂಡಗಳೇನು? ಉದಾಹರಣೆಗೆ, ಚಾಮರಾಜನಗರ, ಮೈಸೂರು, ಇವೆಲ್ಲವೂ ಇದರಲ್ಲಿ ಸೇರಿಲ್ಲ. ಏಕೆ ಸೇರಿಲ್ಲ? ನೀವು ಅನುಸರಿಸಿರತಕ್ಕ ಮಾನದಂಡಗಳೇನು ಎನ್ನುವ ಪ್ರಶ್ನೆಯನ್ನು ತಮ್ಮಲ್ಲಿ ಕೇಳುವುದಕ್ಕೆ ಇಚ್ಛಿಸುತ್ತೇನೆ. ಈ 9 ಜಿಲ್ಲೆಗಳು ಯಾವುವು ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಸಿ.ಎಂ.ಉದಾಸಿ : ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇನೆ. ಕಾವೇರಿ ಬೇಸಿನ್‌ನಲ್ಲಿ ಬರುವ ಯಾವುದೇ ಜಿಲ್ಲೆಗಳನ್ನು ಇದರಲ್ಲಿ ತೆಗೆದುಕೊಂಡಿಲ್ಲ, ತೆಗೆದುಕೊಳ್ಳುವುದಕ್ಕೂ ಅವಕಾಶವಿಲ್ಲ ಎಂಬುದನ್ನೂ ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಕಾವೇರಿ ವ್ಯಾಪ್ತಿಯಲ್ಲಿ ಬರದೇ ಇರತಕ್ಕಂಥ ಉಳಿದ ಜಿಲ್ಲೆಗಳನ್ನು ಆಯ್ಕೆ ಮಾಡಬೇಕಾದಾಗ ಇವುಗಳನ್ನೆಲ್ಲ ಆಯ್ಕೆ ಮಾಡಿದ್ದಾರೆ. ಕಾವೇರಿ ಬೇಸಿನ್ ಹೊರತುಪಡಿಸಿ ಉಳಿದವುಗಳನ್ನು ಆಯ್ಕೆ ಮಾಡಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಕೋಲಾರ ತುಮಕೂರು, ಚಿತ್ರದುರ್ಗ, ರಾಯಚೂರು, ಬೀದರ್, ಬಳ್ಳಾರಿ, ಕೊಪ್ಪಳ, ಬಾಗಲಕೋಟೆ, ಹಾವೇರಿ, ಈ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆಯೇ ವಿನಾ ಆ ಜಿಲ್ಲೆಗಳಲ್ಲಿರುವ ಎಲ್ಲ ತಾಲ್ಲೂಕುಗಳನ್ನೂ ಆಯ್ಕೆ ಮಾಡಿಲ್ಲ ಎನ್ನುವುದನ್ನೂ ಸಹ ತಮ್ಮ ಗಮನಕ್ಕೆ ತರುತ್ತಿದ್ದೇನೆ. 9 ಜಿಲ್ಲೆಗಳಲ್ಲಿ 34 ತಾಲ್ಲೂಕುಗಳನ್ನು ಮಾತ್ರ ಆಯ್ಕೆ ಮಾಡಿದ್ದಾರೆ. ಹಾವೇರಿ ಜಿಲ್ಲೆಯಲ್ಲೂ ಒಂದೇ ತಾಲ್ಲೂಕನ್ನು ಆಯ್ಕೆ ಮಾಡಿದ್ದಾರೆ. ಹೀಗೆ ತಮಗೆ ಗೊತ್ತಿರಲೆಂದು ಈ ಮಾತುಗಳನ್ನು ಹೇಳುತ್ತಿದ್ದೇನೆ. 2005 ಕೆರೆಗಳನ್ನು ಈ ಯೋಜನೆಯಲ್ಲಿ ಸೇರಿಸಿ, ಅದಕ್ಕೆ ಬೇಕಾಗಿರುವ ಅನುದಾನವನ್ನು ಉಪಯೋಗಿಸಿ ಇವತ್ತು ಆ ಕೆಲಸ ನಡೆದಿದೆ. ಆದರೆ, ಇಷ್ಟು ತಮಗೆ ತೃಪ್ತಿ ತರಬಹುದೆಂದು ಭಾವಿಸಿದ್ದೇನೆ.

ಶ್ರೀ ಆರ್.ಧ್ರುವನಾರಾಯಣ : ಅಧ್ಯಕ್ಷರೆ, ಈಗಾಗಲೇ ಕಾವೇರಿ ನೀರು ಕುರಿತಾಗಿ ತೀರ್ಪು ಹೊರ ಬಂದಿದೆ. ಈಗ ಯಾವುದೇ ತರಹದ tribunal objection ಇಲ್ಲ. ಆದುದರಿಂದ, ನಮ್ಮದು ಬಳಷ್ಟು ಹಿಂದುಳಿದ ಜಿಲ್ಲೆಯಾಗಿದೆ. ಚಾಮರಾಜನಗರ ಜಿಲ್ಲೆಯು ಡಾ: ನಂಜುಂಡಪ್ಪನವರ ವರದಿಯು most backward District ಆಗಿರುವ ನಮ್ಮ ಜಿಲ್ಲೆಗೂ ಅನ್ವಯವಾಗುತ್ತದೆ. ಈಗ ಕಾವೇರಿ ನೀರು ಕುರಿತ ತೀರ್ಪು ಬಂದಿರುವುದಿಂದ ತತ್‌ಕ್ಷಣ ತಾವು ನಮ್ಮ ಜಿಲ್ಲೆಗಳನ್ನೂ ಕೂಡ ವಿಶ್ವಬ್ಯಾಂಕ್ ನೆರವಿಗೆ

ಸೇರಿಸಬೇಕೆಂಬ ಒತ್ತಾಯವನ್ನು ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಮಾಡುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ : ನಾನು ಮೊದಲು ಈ ಇಲಾಖೆಯನ್ನು ನೋಡಿಕೊಳ್ಳುತ್ತಿರಬೇಕಾದರೆ, ನನ್ನ ಗಮನಕ್ಕೆ ಬಂದಂತೆ, 2ನೇ ಹಂತದಲ್ಲಿ ವಿಶ್ವಬ್ಯಾಂಕಿನ ನೆರವಿನ ಯೋಜನೆಯಲ್ಲಿ ಇದನ್ನು ಸೇರಿಸಬೇಕಾದ ಸಂದರ್ಭದಲ್ಲಿ ಉಳಿದ ಜಿಲ್ಲೆಗಳನ್ನು ತೆಗೆದುಕೊಳ್ಳಬೇಕೆನ್ನುವಂತಹ ವಿಚಾರ ವಿಮರ್ಶೆಯಲ್ಲಿ ಇತ್ತು. 2ನೇ ಹಂತದಲ್ಲಿ ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಚಾಮರಾಜ ನಗರವನ್ನೂ ಸೇರಿಸಬೇಕೆಂಬ ವಿಚಾರಕ್ಕೆ ಸನ್ಮಾನ್ಯ ಉಪ ಮುಖ್ಯಮಂತ್ರಿಯವರ ಗಮನಕ್ಕೆ ತಂದು, ತಮ್ಮ ಬೇಡಿಕೆ ಏನಿದೆಯೋ, ಅದನ್ನು ಈಡೇರಿಸುವುದಕ್ಕೆ ಪ್ರಯತ್ನಿಸುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೆ, ಇಲ್ಲಿ ಪ್ರೆಸ್‌ನವರು ಯಾರೂ ಇಲ್ಲ, ಬಹುತೇಕ ಮಂತ್ರಿಗಳು ಇಲ್ಲ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ನಿಮ್ಮ ಕಡೆಯೂ ಯಾರೂ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಒಪ್ಪುತ್ತೇನೆ, I agree. ಇಲ್ಲಿಯೂ ಯಾರು ಇಲ್ಲವೆಂದು ಹೇಳಿದೆನಲ್ಲ.

ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ ತ್ಯಾಜ್ಯ ವಸ್ತುಗಳನ್ನು ನಾಶಗೊಳಿಸುವುದು

231 (505) ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲೆಕ್ಟ್ರಾನಿಕ್ ತ್ಯಾಜ್ಯ ವಸ್ತುಗಳು ಪರಿಸರಕ್ಕೆ ಹಾನಿಯಾಗದಂತೆ ಹೇಗೆ ನಾಶ ಮಾಡಬೇಕೆಂಬ ಕಾನೂನು ರಾಜ್ಯದಲ್ಲಿ ಇದೆಯೇ (ವಿವರ ನೀಡುವುದು);

ಆ) ಹಾಗಿಲ್ಲದಿದ್ದಲ್ಲಿ, ವೈಜ್ಞಾನಿಕವಾಗಿ ಈ ಸಾಧನೆಗಳನ್ನು ನಾಶ ಗೊಳಿಸುವ ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಲು ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು; (ವಿವರ ನೀಡುವುದು);

ಇ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಎಷ್ಟು ಎಲೆಕ್ಟ್ರಾನಿಕ್ ತ್ಯಾಜ್ಯ ವಸ್ತುಗಳು ಉತ್ಪನ್ನವಾಗುತ್ತದೆ, ಹಾಗೂ ಇದನ್ನು ಈಗ ಹೇಗೆ ನಾಶ ಮಾಡಲಾಗುವುದು (ವಿವರ ನೀಡುವುದು)?